(VI) ಐ.ಆರ್.ಡಿ.ಪಿ. ಮತ್ತು ಅಂತ್ಯೋದಯ ಯೋಜನೆ ಕಾರ್ಯಕ್ರಮದಿಂದ ಫಲಾನುಭವಿಗಳಿಗೆ ಸರಿಯಾಗಿ ಪ್ರಯೋಜನವಾಗದೆ ಇರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಐಆರ್‌ಡಿಪಿ, ಮತ್ತು ಅಂತ್ಯೋದಯ ಯೋಜನೆಯಲ್ಲಿ ಪ್ರಯೋಜನದಾರರಿಗೆ ಜಾನುವಾರುಗಳನ್ನು ಅಧಿಕಾರಿಗಳು ಕೊಡಿಸುವಲ್ಲಿ ಸಾಕಷ್ಟು ಮಂದ್ದ ಕೂಲಿ ಕಾರ್ಮಿಕರಿಗೆ ಅನ್ಯಾಯವಾಗುತ್ತಿದ್ದು ಈ ಬಗ್ಗೆ ಶಿಕಾರಿಪುರ ತಾಲ್ಲೂಕಿನಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಸರ್ಕಾರದ ಗಮನ ಸೆಳೆದರೂ ಯಾವ ಉಪಯೋಗವಾಗಿಲ್ಲ. ಈಗ ಮಂತ್ರಿಮಹೋದಯರು ೨ ದಿವಸದ ಹಿಂದೆ ಶಿಕಾರಿಪುರ ತಾಲ್ಲೂಕಿನ ವಿತಲನಗರದ ೧೬ ಜನ ಪ್ರಯೋಜನದಾರರನ್ನು ಹೊಸೂರು ಬ್ಯಾಂಚಿನ ಸಿಂಡಿಕೇಟ್ ಬ್ಯಾಂಕಿನವರು, ವೆಟರ್ನರಿ ಡಾಕ್ಟರವರು ದಾವಣಗೆರೆ ಸಂತೆಯಲ್ಲಿ ಎಮ್ಮೆಯಂದನ್ನು ಕೊಡಿಸುತ್ತೇವೆಂದು ಕರೆದುಕೊಂಡು ಹೋಗಿ ಒಂದು ಸಾವಿರದ ಐದು ನೂರು ರೂಪಾಯಿಯ ಬೆಲೆ ಬಾಳದ ಎಮ್ಮೆಯನ್ನು ರೂ. ೨೦೦೦ದಿಂದ ೨೩೦೦ರವರೆಗೆ ಕೊಡಿಸಿದ್ದು ಕೆಲವು ದಳ್ಳಾಳಿಗಳ ಮೂಲಕ ಅಧಿಕಾರಿಗಳು ಪ್ರಾಮೀಲಾಗಿ ಈ ರೀತಿಯ ಕೃತ್ಯ ನಡೆಸಿರುತ್ತಾರೆ. ಈ ಅನ್ಯಾಯವನ್ನು ಸಹಿಸದ ಪ್ರಯೋಜನದಾರರು ನಮಗೆ ಈ ರೀತಿಯ ಎಮ್ಮೆ ಕೊಡಿಸಿದರೆ ಸಾಲ ವಾಪಸ್ಸು ಕಟ್ಟಲು ಆಗುವುದಿಲ್ಲವೆಂದು ಬ್ಯಾಂಕ್ ಮ್ಯಾನೇಜರ್‌ರವರಿಗೆ ಅರ್ಜಿ ಕೊಟ್ಟಿರುತ್ತಾರೆ. ಇಂತಹ ಎಮ್ಮೆಗಳಿಗೆ ವೆಟರ್ನರಿ ಡಾಕ್ಟರ್ ಹೇಗೆ ಸರ್ಟಿಫೈ ಮಾಡಿದ್ದಾರೆ ಮತ್ತು ಇಂತಹ ಅಧಿಕಾರಿಗಳ ವಿರುದ್ಧ ಸರಕಾರ ಏವಂ ಕ್ರಮ ಕೈಗೊಳ್ಳುತ್ತದೆ ಎಂಬ ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂಥ ವಿಷಯದ ಬಗ್ಗೆ ಜಿಲ್ಲಾಧಿಕಾರಿಗಳನ್ನು ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ಮಾಡಿ ಅನ್ಯಾಯವನ್ನು ಸರಿಪಡಿಸುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೮೬–೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ ೨೯–ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣ

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಸೇವೆ ಮತ್ತು ಕುಟುಂಬ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩೪,೪೭,೫೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೧,೦೦,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೦–ಜನಾರೋಗ್ಯ

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)— ಮಾನ್ಯ ಅಧ್ಯಕ್ಷರೇ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜನಾರೋಗ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೩೮,೩೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.